

# ಚಾರ್ಮಾಡಿ ಕಣಿವೆಯಲ್ಲಿ



ಜಲ ಕನ್ಯೆಯರ ನರ್ತನ

■ ಸುಮನ್ ಪಟವರ್ಧನ್

ಚಿಕ್ಕಮಗಳೂರು– ದಕ್ಷಿಣ ಕನ್ನಡ ಜಿಲ್ಲೆಯ ನಡುವಣ ಪ್ರಮುಖ ಸಂಪರ್ಕ ರಸ್ತೆಗಳಲ್ಲಿ ಚಾರ್ಮಾಡಿ ಘಾಟಿಗೆ ಅಗ್ರಸ್ಥಾನ. 100 ವರ್ಷ ಹಳೆಯದಾದ ರಸ್ತೆಯಿದು. ಇದು ಬರೀ ರಸ್ತೆಯಲ್ಲ, ಪ್ರಕೃತಿ ಚೆಲುವಿನ ಗಣಿ. ನಿಸರ್ಗ ಬಿಡಿಸಿದ ಚಿತ್ತಾರ.

ಕೊಟ್ಟಿಗೆಹಾರ ದಾಟಿ ಒಂದು ಕಿ.ಮೀ ಸಾಗುತ್ತಿದ್ದಂತೆ ಇಲ್ಲಿನ ಸೌಂದರ್ಯರಾಶಿ ಒಂದೊಂದಾಗಿ ಅನಾವರಣಗೊಳ್ಳುತ್ತದೆ. ಇದೊಂದು ಭಿನ್ನ ಪರಿಸರ. ಒಂದೆಡೆ ಭಾರಿ ಗಾತ್ರದ ಹೆಬ್ಬಂಡೆಗಳಿಂದ ಕೂಡಿದ ಪರ್ವತ ಶ್ರೇಣಿ. ಇನ್ನೊಂದೆಡೆ ಆಳ ಪ್ರಪಾತ.

ಅನುದಿನವೂ ಇಲ್ಲಿನ ನಿಸರ್ಗದಲ್ಲಿ ಬದಲಾವಣೆ. ಸುಮಾರು 15 ಕಿ.ಮೀ. ಅಂತರದ ಘಾಟಿಯ ಚೆಲುವು ವರ್ಣನೆಗೆ ನಿಲುಕದ್ದು. ಋತುಮಾನಗಳಿಗೆ ಅನುಗುಣವಾಗಿ ಹಸಿರಿನಲ್ಲೇ ಬದಲಾವಣೆ. ವಸಂತ ಮಾಸದ ದಿನಗಳಲ್ಲಿ ವರ್ಣಮಯ ಓಕುಳಿ. ಹಸಿರೆಲೆಗಳ ಮಧ್ಯೆ ಬಣ್ಣ ಬಣ್ಣದ ಚಿತ್ತಾರ. ಕಣ್ಣಿಗೆ ಕಾಣುವಷ್ಟು ದೂರ ಹಸಿರ ಸಿರಿ. ಒಂದಕ್ಕೊಂದು ಪೋಣಿಸಿದಂತೆ ನಿಂತ ಬೆಟ್ಟಗುಡ್ಡಗಳು. ಇನ್ನೊಂದೆಡೆ ಹಸಿರ ರಾಶಿಯ ಮಧ್ಯೆ ಬಂಡೆಗಳು. ಆಳ ಕಣಿವೆಯಲ್ಲಿ ಸಸ್ಯರಾಶಿಯ ಸೋಪಾನ. ನವಿರಾದ ಹುಲ್ಲು.

ಬಹುಶ: ಇಲ್ಲಿ ಕಾಣಸಿಗದ ಸಸ್ಯವಿಲ್ಲ. ಇದು ಸಸ್ಯಸಂಪತ್ತಿನ ಭಂಡಾರವೂ ಹೌದು. ನಿಸರ್ಗದ ಸೌಂದರ್ಯವೆಲ್ಲ ಇಲ್ಲಿಯೇ ಮೇಳೈಸಿದಂತಿದೆ. ಅಂಕು–ಡೊಂಕಿನ ಹಾದಿಯಲ್ಲಿ ಕ್ರಮಿಸುತ್ತಿದ್ದರೆ

(8ನೇ ಪುಟ ನೋಡಿ)

